ಸಾಕ್ಷಿಯನ್ನು ದಿನಾಂಕ **05-02-2024** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎ.ಜೆ.ಎನ್. ವಕೀಲರಿಂದಃ**

ಚಾ.ಸಾ.2 ರಿಂದ 4 ರವರು ಖುದ್ದಾಗಿ ನಮ್ಮ ಅಂಚೆ ಇಲಾಖೆಗಾಗಲೀ ಅಥವಾ ಪೊಲೀಸ್ ಇಲಾಖೆಗಾಗಲೀ ದೂರು ನೀಡಿರುತ್ತಾರಾ ಎಂದರೆ ಸಾಕ್ಷಿಯು ಅಂಚೆ ಇಲಾಖೆಗೆ ದೂರನ್ನು ನೀಡಿರುವುದಿಲ್ಲ, ಆದರೆ ಪೊಲೀಸ್ ಇಲಾಖೆಗೆ ದೂರನ್ನು ನೀಡಿದ್ದಾರಾ -ಇಲ್ಲವಾ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಇಲಾಖೆಗೆ ದೂರನ್ನು ಇದೇ ವಿಚಾರವಾಗಿ ನೀಡಬೇಕಾಗುತ್ತದೆ ಎಂದರೆ ಸರಿ.

ಚಾ.ಸಾ.2 ರವರು ಶಿಕ್ಷಕರು ಎಂದರೆ ಸರಿ. ಒಂದು ವೇಳೆ ಅವ್ಯವಹಾರವಾಗಿದ್ದರೆ ಚಾ.ಸಾ.2 ರವರು ಶಿಕ್ಷಕರಾದ ಕಾರಣ ಚಾ.ಸಾ.2 ರವರಿಗೆ ಮಾಹಿತಿಯ ಕೊರತೆ ಇರುವುದಿಲ್ಲ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಾನು ನನ್ನ ಕರ್ತವ್ಯದ ಅವಧಿಯಲ್ಲಿ 2001 ಅಥವಾ 2002 ರ ಇಸವಿಗೆ ನಾನು ಅಂಚೆ ಕಚೇರಿಗೆ ಭೇಟಿ ನೀಡಿರುತ್ತೇನೆ. ಹೀಗೆ ಒಟ್ಟು ನನ್ನ ಸೇವಾ ಅವಧಿಯಲ್ಲಿ 3-4 ಬಾರಿ ಅಂಚೆ ಇಲಾಖೆಗೆ ಭೇಟಿ ನೀಡಿದ್ದು, ಸದರಿ ಭೇಟಿಯು ಈ ಪ್ರಕರಣದ ಪೂರ್ವಾವಧಿಯಲ್ಲಿ ಆಗಿರುತ್ತದೆ. ಈ ಪ್ರಕರಣದ ನಂತರ ನಾನು ವಿಚಾರಣಾ ಸಲುವಾಗಿ ಹಲವಾರು ಬಾರಿ ಅಂಚೆ ಕಚೇರಿಗೆ ಭೇಟಿ ನೀಡಿರುತ್ತೇನೆ.

ನಿಪಿ-4 ಹಾಗೂ 9 ಖಾತೆದಾರರ ಬಳಿ ಇರುತ್ತದೆ. ನಾನು ಅಂಚೆ ಕಚೇರಿಗೆ ಭೇಟಿ ನೀಡಿದ ಸಮಯದಲ್ಲಿ ಸದರಿ ಅಂಚೆ ಕಚೇರಿಯಲ್ಲಿ ಪಾಸ್ ಪುಸ್ತಕಗಳು ಇರಲಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 12-02-2004 ರಂದು ಅಂಚೆ ಕಚೇರಿಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಅಂಚೆ ಕಚೇರಿಯಲ್ಲಿ ಸಾಕ್ಷಿದಾರರು ಯಾರಾದರೂ ಇದ್ದರಾ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಸಾಕ್ಷಿದಾರರ ಪರಿಚಯ ನನಗೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ.

ನಿಪಿ-30 ರ ದಾಖಲೆಯನ್ನು ಯಾರು ಬರೆದದ್ದು ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-30 ರ ದಾಖಲೆಯನ್ನು ಯಾರು ಹಾಜರುಪಡಿಸಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಸೇವಾವಧಿ ಮುಗಿದ ನಂತರ ನನ್ನ ಹುದ್ದೆಗೆ ಬಂದ ಅಧಿಕಾರಿಯು ನಿಪಿ-30 ರ ದಾಖಲೆಯನ್ನು ಹಾಜರುಪಡಿಸಿರಬಹುದು.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಚಾ.ಸಾ.2 ರಿಂದ 4 ರವರಿಗೆ ಒಂದು ವೇಳೆ ತೊಂದರೆಯಾಗಿದ್ದರೆ ಅವರು ದೂರು ನೀಡುತ್ತಿದ್ದರು ಎಂದರೆ ಸಾಕ್ಷಿಯು ಅವರು ದೂರು ನೀಡುತ್ತಿದ್ದರೋ–ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ–10 ರ ದಾಖಲೆಯನ್ನು ಚಾ.ಸಾ.3 ರವರು ಬರೆದಿರುತ್ತಾರೆ. ನಾನು ಪ್ರಶ್ನೆಗಳನ್ನು ಕೇಳಿದಾಗ, ಉತ್ತರದ ರೀತಿಯ ವಿವರಗಳನ್ನು ಚಾ.ಸಾ.3 ರವರು ಬರೆದಿರುತ್ತಾರೆ. ನಮ್ಮ ಇಲಾಖೆಯಿಂದ ಹೇಳಿಕೆಯನ್ನು ನೀಡುವ ರೀತಿಯಲ್ಲಿ ನಾನು ಉತ್ತರವನ್ನು ಪಡೆದಿರುತ್ತೇನೆ ಎಂದರೆ ಸರಿ.

ಆರೋಪಿಯು ತಲೆಮರೆಸಿಕೊಂಡಿದ್ದರ ಕುರಿತು ನಾವು ಶೋ–ಕಾಸ್ ನೋಟೀಸನ್ನು ನೀಡಿದ್ದೀರಾ ಎಂದರೆ ಸಾಕ್ಷಿಯು ನಾವು ಅವರ ಮನೆಗೆ ಹೋಗಿ ನೋಟೀಸನ್ನು ಅಂಟಿಸುವ ವ್ಯವಸ್ಥೆಯನ್ನು ಮಾಡಿ, ಅಂಟಿಸಿರುವ ಬಗ್ಗೆ ಸಹಿಯನ್ನು ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ನೋಟೀಸನ್ನು ಜ್ಯಾರಿಗೊಳಿಸಿರುವ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಆರೋಪಿಯನ್ನು ಸೇವೆಯಿಂದ ತೆಗೆದು ಹಾಕಿದ ಬಗ್ಗೆ ನಾವು ನೋಟೀಸನ್ನು ಆರೋಪಿಗೆ ನೀಡಿದ್ದೀರಾ ಎಂದರೆ ಸಾಕ್ಷಿಯು ನಾವು ಇಲಾಖಾ ವಿಚಾರಣೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಇಲಾಖಾ ವಿಚಾರಣೆ ಮಾಡಿದ ಪ್ರತೀ ನೋಟೀಸು ಆರೋಪಿಗೆ

ಕಳುಹಿಸಲಾಗುತ್ತದೆ. ನಾವು ಇಲಾಖಾ ವಿಚಾರಣೆ ಮಾಡಿದ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಮ್ಮ ಅಂಚೆ ಇಲಾಖೆಗೆ ಸಂಬಂಧಿಸಿದ ಎಲ್ಲಾ ತಃಖ್ತೆಗಳನ್ನು ಮರ್ಕಂಜ ಅಂಚೆ ಕಚೇರಿಯಿಂದ ದೊಡ್ಡತೋಟ ಅಂಚೆ ಕಚೇರಿಗೆ ಯಾರು ತೆಗೆದುಕೊಂಡು ಹೋಗುತ್ತಾರೆ ಎಂದರೆ ಸಾಕ್ಷಿಯು ಕಡತ ಇರುವುದಿಲ್ಲ, ಆದರೆ ಬಿ ಒ ಅಕೌಂಟ್ ನ್ನು ಹಾಗೂ ಇತರೇ ಪತ್ರಗಳನ್ನು ಬ್ಯಾಗ್ ಮೂಲಕ ಚಾ.ಸಾ.5 ರವರು ತೆಗೆದುಕೊಂಡು ಹೋಗುತ್ತಾರೆ ಎಂದು ನುಡಿಯುತ್ತಾರೆ. ಇಂತಹ ಯಾವುದೇ ವಿವರಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಾಗಲೀ, ನನ್ನ ಹೇಳಿಕೆಯಲ್ಲಾಗಲೀ ಹೇಳಲಿಲ್ಲ ಎಂದರೆ ಸರಿ. ನಾನು ಹೇಳಿದಂತಹ ಸೀಲ್ಡ್ ಬ್ಯಾಗ್ ನ್ನು ಮರ್ಕಂಜ ಅಂಚೆ ಕಚೇರಿಯಿಂದ ನೆಲ್ಲೂರು ಕೆಮ್ರಾಜೆ ಅಂಚೆ ಕಚೇರಿಗೆ ಹೋಗಿ, ಅಲ್ಲಿಂದ ಬಸ್ ಮೂಲಕ ರವಾನಿಸಲಾಗುತ್ತದೆ. ಈ ಯಾವುದೇ ವಿವರಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಾಗಲೀ, ನನ್ನ ಹೇಳಿಕೆಯಲ್ಲಾಗಲೀ, ನನ್ನ ಮಹಜರಿನಲ್ಲಾಗಲೀ ಹೇಳಲಿಲ್ಲ ಎಂದರೆ ಸರಿ. ನಾನು ಹೇಳಿದ ಸೀಲ್ಡ್ ಬ್ಯಾಗನ್ನು ತೆರೆಯುವ ಅಧಿಕಾರವು ದೊಡ್ಡತೋಟ ಅಂಚೆ ಕಚೇರಿಯವರಿಗೆ ಇರುತ್ತದೆ.

ಕಳುಹಿಸಿಕೊಟ್ಟ ಪ್ರತೀ ದಿನದ ತಃಖ್ತೆಗಳು ಅದೇ ದಿನ ಹಿಂತಿರುಗಿ ಕಳುಹಿಸಿಕೊಟ್ಟ ಅಂಚೆ ಕಚೇರಿಗೆ ಬರುತ್ತದಾ ಎಂದರೆ ಸಾಕ್ಷಿಯು ದೈನಂದಿನ ವ್ಯವಹಾರ, ಹಣದ ವ್ಯವಹಾರಗಳನ್ನು ಬ್ಯಾಗ್ ಸಮೇತ ಮರುದಿನ ಪ್ರತ್ಯೇಕವಾದ dispatch ನಲ್ಲಿ ನಮೂದಿಸಿ

ಬರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತಹ ದಿನವಹಿ ಲೆಕ್ಕಾಚಾರದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಆರೋಪಿಯ ತಂದೆಯವರು ಅಂಚೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ಆರೋಪಿಯ ತಂದೆಯವರು ಮಾಡುತ್ತಿದ್ದ ಕೆಲಸವನ್ನು ಆರೋಪಿಯು ಮುಂದುವರಿಸುತ್ತಿದ್ದರು ಎಂದರೆ ಸರಿ. ಶಾಖಾ ಕಚೇರಿಗೆ ನೇಮಕಾತಿ ಮಾಡುವ ಹಾಗೂ ವಜಾ ಮಾಡುವ ಅಧಿಕಾರ Senior Superintend of Post Office ನವರಿಗೆ ಇರುತ್ತದೆ, ಆ ಅಧಿಕಾರ ನನಗೆ ಇರುವುದಿಲ್ಲ. ನಾನು ಅಂಚೆ ಇಲಾಖೆಗೆ ಸೇರುವ ಮೊದಲೇ ಆರೋಪಿಯ ತಂದೆಯವರು ತೀರಿ ಹೋಗಿ ಆರೋಪಿಯು ಸದರಿ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರು. ಆರೋಪಿಯ ತಂದೆಯವರು ಮಾಡುತ್ತಿದ್ದ ಕೆಲಸವನ್ನು ಅವರ ಅನಾರೋಗ್ಯದ ನಿಮಿತ್ತ ಆರೋಪಿಯು ಸದರಿ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಆರೋಪಿಯ ತಂದೆಯು ರಜೆ ಹಾಕಿದ್ದರಿಂದ, ರಜೆ ಹಾಕುವ ಸಮಯದಲ್ಲಿ ತನ್ನ ಸೇವಾವಧಿಯನ್ನು ಯಾರು ಮಾಡಬೇಕೆಂದು ನಮೂದಿಸಿದ್ದು, ಆ ಪ್ರಕಾರ ಆರೋಪಿಯು ಸದರಿ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ.

ಆರೋಪಿಯ ತಂದೆಯು ನೀಡಿದ ರಜೆ ಅರ್ಜಿಯಲ್ಲಿ ಅವರ ಪರವಾಗಿ ಆರೋಪಿಯು ಕೆಲಸ ಮಾಡಬೇಕೆಂದು ನಮೂದು ಮಾಡಿರುತ್ತದೆ. ಸದರಿ

ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿಯ ತಂದೆಯ ಸೇವಾವಾಧಿಯಲ್ಲಿ ನಡತೆಯ ಬಗ್ಗೆ ಕರ್ತವ್ಯ ಬಗ್ಗೆ ಲೋಪ ಇತ್ತಾ ಎಂದರೆ ನನಗೆ ಅದರ ಬಗ್ಗೆ ತಿಳಿದಿರುವುದಿಲ್ಲ. ಆರೋಪಿಯ ತಂದೆಯವರು ನೀಡಿದ ರಜಾ ಅರ್ಜಿಯಲ್ಲಿ ರಜೆಯು ಮಂಜೂರಾಗಿ, ಆರೋಪಿಯು ಅವರ ಕೆಲಸವನ್ನು ಮುಂದುವರೆಸಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ಆರೋಪಿಯು ಎಷ್ಟು ಸಮಯದವರೆಗೆ ಕೆಲಸವನ್ನು ಮುಂದುವರೆಸಿಕೊಂಡು ಹೋಗಿರುತ್ತಾರೆ ಹಾಗೂ ಆರೋಪಿಯ ತಂದೆಯವರು ತಾನು ರಜೆಯನ್ನು ಹಾಕುವ ಪೂರ್ವದಲ್ಲಿ ಎಷ್ಟು ಸಮಯ ಕೆಲಸವನ್ನು ಮಾಡಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ಈ ವಿಚಾರಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ , ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ನನ್ನ ಕರ್ತವ್ಯದ ಅವಧಿಯಲ್ಲಿ , ನನ್ನ ಅಧೀನದ ಅಂಚೆ ಇಲಾಖೆಯಲ್ಲಿ ಯಾವನೇ ಒಬ್ಬ ವ್ಯಕ್ತಿಯು ಕೆಲಸ ಮಾಡುತ್ತಿದ್ದರೆ , ಅವರ ಬಗ್ಗೆ ನನ್ನ ಗಮನಕ್ಕೆ ಬರುತ್ತದೆ ಎಂದರೆ ಸರಿ. ನಾನು ಸುಪರ್ದಿಯಲ್ಲಿದ್ದ ಸಮಯದಲ್ಲಿ ಮರ್ಕಂಜ ಅಂಚೆ ಕಚೇರಿಯಲ್ಲಿ ಇಡಿಡಿಎ ( Extra Departmental Delivery Agent) ಆಗಿ ಜಯರಾಮ ಭಟ್ ರು ಆಗಿದ್ದರು. ಜಯರಾಮ ಭಟ್ ರವರು ಇಲಾಖಾ ನೇಮಕಾತಿಯಲ್ಲಿದ್ದರಾ ಅಥವಾ ನನ್ನ ಕೃಪಾಕಟಾಕ್ಷದಲ್ಲಿ ಇದ್ದರಾ ಎಂದರೆ ಸಾಕ್ಷಿಯು, ಜಯರಾಮ ಭಟ್ ರವರು ನಾನು ಅಂಚೆ ಇಲಾಖೆಗೆ ಸೇರುವ 25 ವರ್ಷದ ಪೂರ್ವದಲ್ಲಿಯೇ ಅವರು ಸೇವೆಗೆ ನೇಮಕಾತಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಹೊಂದಿದವರಾಗಿರುತ್ತಾರೆ, ನಾನು ಹೇಗೆ ಅವರ ಮೇಲೆ ಔದಾರ್ಯ ತೋರಿಸಲು ಸಾಧ್ಯ ಎಂದು ನುಡಿಯುತ್ತಾರೆ.

ಜಯರಾಮ ಭಟ್ ರವರ ಹೇಳಿಕೆ ಅಥವಾ ಯಾವುದೇ ಸಾಕ್ಷ್ಯಗಳನ್ನು ಈ ಪ್ರಕರಣಕ್ಕೆ ತೆಗೆದುಕೊಂಡಿಲ್ಲ ಎಂದರೆ ಸರಿ. ಅವರು ಯಾವುದೇ ಮಹಜರಿಗಾಗಲೀ, ಹೇಳಿಕೆಗಾಗಲೀ ಈ ಕೇಸಿಗೆ ಸಂಬಂಧಿಸಿ, ಸಹಿಗಳನ್ನು ಹಾಕಿರುವುದಿಲ್ಲ ಎಂದರೆ ಸರಿ. ಜಯರಾಮ ಭಟ್ ರವರು ಹಾಗೂ ಆರೋಪಿಯು ಒಂದೇ ಅಂಚೆ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸರಿ. ಸದರಿ ಅಂಚೆ ಕಚೇರಿಯಲ್ಲಿ ಸಂಬಂಧಿಸಿದಂತೆ ಜಯರಾಮ ಭಟ್ ರವರು ನಿರ್ವಹಿಸುವ ಕೆಲಸಗಳು ಆರೋಪಿಗೆ ತಿಳಿಯುತ್ತದೆ, ಆರೋಪಿಯು ಮಾಡುತ್ತಿದ್ದ ಕೆಲಸಗಳು ಜಯರಾಮ ಭಟ್ ರಿಗೆ ತಿಳಿಯುತ್ತದೆ ಎಂದರೆ ಸರಿ. ಡೆಪಾಸಿಟ್ ವಿಷಯಕ್ಕೆ ಸಂಬಂಧಿಸಿದ ಮಾಹಿತಿ ಆರೋಪಿಗೆ ಮಾತ್ರ ತಿಳಿದಿದ್ದು, ಜಯರಾಮ ಭಟ್ ರಿಗೆ ತಿಳಿಯುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಜಯರಾಮ ಭಟ್ ರವರಿಂದ ಆರೋಪಿಯ ವಿಚಾರವಾಗಿ ಯಾವುದೇ ಮಾಹಿತಿಯನ್ನು ಕಲೆ ಹಾಕಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯ ಕರ್ತವ್ಯ ಲೋಪದ ಬಗ್ಗೆ ಮೌಖಿಕವಾಗಿ ವಿಚಾರಿಸಿರುತ್ತೇವೆ ಎಂದು ನುಡಿಯುತ್ತಾರೆ.

ಮರ್ಕಂಜ ಅಂಚೆ ಕಚೇರಿಯಲ್ಲಿ ಆರ್.ಡಿ. 100–150 ಹಾಗೂ ಉಳಿತಾಯ ಖಾತೆಗಳು 200–250 ಇರಬಹುದು. ಸದರಿ ಖಾತೆಗಳು ಆರೋಪಿಯು

ಸೇವೆಯಲ್ಲಿರುವಾಗ ಊರ್ಜಿತದಲ್ಲಿದ್ದ ಖಾತೆಗಳು ಎಂದರೆ ಸಾಕ್ಷಿಯು ಕೆಲವು ಖಾತೆಗಳು silent ಆಗಿರಬಹುದು, ಕೆಲವು ಊರ್ಜಿತದಲ್ಲಿರಬಹುದು, ನಿಖರವಾಗಿ ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಹಾಜರುಪಡಿಸಿದ ಪಾಸ್ ಪುಸ್ತಕಗಳು ದಿನಾಂಕ 04−07−2004 ರಂದು ಯಾರ ನಿಯಂತ್ರಣದಲ್ಲಿತ್ತು ಎಂದರೆ Senior Superintend Post Officer ರವರ ಬಳಿ ಇತ್ತು ಎಂದು ಸಾಕ್ಷಿಯು ನುಡಿಯುತ್ತಾರೆ.

ನಿಪಿ−3 ನ್ನು ಯಾರು ಬರೆದಿರುತ್ತಾರೆಂದು ನನಗೆ ಹೇಳಲಾಗುವುದಿಲ್ಲ. ನಿಪಿ−3 ನ್ನು ನನ್ನ ಸಮಕ್ಷಮದಲ್ಲಿ ಬರೆದಿರುತ್ತಾರೆ. ಪೊಲೀಸರು ತನಿಖೆಯ ಬಗ್ಗೆ ಮರ್ಕಂಜ ಅಂಚೆ ಕಚೇರಿಗೆ ಬಂದಿರುತ್ತಾರೋ−ಇಲ್ಲವೋ ಎಂದು ನನಗೆ ಮಾಹಿತಿ ಇರುವುದಿಲ್ಲ.

ನಿಪಿ−4 ರಿಂದ 24 ರ ದಾಖಲೆಗಳು printed form ಆಗಿದ್ದು ಭರ್ತಿ ಮಾಡುವ ದಾಖಲೆಗಳು ಎಂದರೆ ಸರಿ. ಸದರಿ ದಾಖಲೆಗಳಲ್ಲಿ ಭರ್ತಿ ಮಾಡಿದ ವಿಷಯಗಳು ಕೈ ಬರಹಗಳಲ್ಲಿ ಇವೆ ಎಂದರೆ ಸರಿ. ಅದನ್ನು ನಾನು ಭರ್ತಿ ಮಾಡಿರುವುದಿಲ್ಲ. ಅದನ್ನು ಆರೋಪಿಯೇ ಭರ್ತಿ ಮಾಡಿರುತ್ತಾರೆ. ಸದರಿ ದಾಖಲೆಗಳನ್ನು ನನ್ನ ಸಮಕ್ಷಮ ಆರೋಪಿಯು ಭರ್ತಿ ಮಾಡಿರುವುದಿಲ್ಲ. ಸದರಿ ದಾಖಲೆಗಳನ್ನು ನನ್ನ ಸಮಕ್ಷಮ ಆರೋಪಿಯು ಭರ್ತಿ ಮಾಡುವ ಪ್ರಮೇಯವು ಬರುವುದಿಲ್ಲ. ಸದರಿ ದಾಖಲೆಗಳನ್ನು ಈ ಕೇಸಿಗಾಗಿ ಸೃಷ್ಟೀಕರಿಸಿದ ದಾಖಲೆಗಳಾಗಿದ್ದು, ಅವುಗಳಲ್ಲಿರುವ ಕೈ ಬರಹಗಳನ್ನು ನಾನು

ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆ ಪತ್ರಗಳಲ್ಲಿರುವ ಕೈ ಬರಹಗಳು ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ-4 ರಿಂದ 24 ರಲ್ಲಿರುವ ಕೈ ಬರಹಗಳು ಒಂದಕ್ಕೊಂದು ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಇರುವುದಿಲ್ಲ ಎಂದು ನುಡಿಯುತ್ತಾರೆ. ಅವುಗಳಲ್ಲಿ ಸರಿಯಾದ ಕೈ ಬರಹಗಳು ಇರುವುದಿಲ್ಲ ಎಂದು ನಾನು ಈ ಕೇಸಿನ ಮೊದಲು ಅಂಚೆ ಕಚೇರಿಗೆ ಹೋದಾಗ remarks ಬರೆದಿರುತ್ತೇನೆ. ನಾನು ಬರೆದ remarks ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಇರುವುದರಿಂದ , ಅದನ್ನು ಪ್ರತ್ಯೇಕವಾಗಿ ಹಾಜರುಪಡಿಸುವ ಪ್ರಮೇಯ ಇರುವುದಿಲ್ಲ.

ನಾನು ಹಾಜರುಪಡಿಸಿದ ನಿಪಿ-2 ರಿಂದ ನಿಪಿ-24 ರ ದಾಖಲೆಗಳು ದೊಡ್ಡತೋಟ ಅಂಚೆ ಕಚೇರಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ಅದು ಮರ್ಕಂಜ ಅಂಚೆ ಕಚೇರಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ಸದರಿ ದಾಖಲೆಗಳು ದೊಡ್ಡತೋಟ ಅಂಚೆ ಕಚೇರಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಬರವಣಿಗೆಗಳಲ್ಲಿ ವ್ಯತ್ಯಾಸವಿದ್ದರೂ ಸಹ ನಾನು ಅವುಗಳನ್ನು ಈ ಕೇಸಿಗಾಗಿ ಸೃಷ್ಟೀಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ಬೇಕಾದ ಹಾಗೆ ಸದರಿ ದಾಖಲೆಗಳನ್ನು ಭರ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಖಾತೆದಾರರು ಹಣ ಜಮೆ ಮಾಡುವಾಗಲೂ ಹಾಗೂ ವಿತ್‌ಡ್ರಾ ಮಾಡುವಾಗಲೂ ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತರಬೇಕಾಗುತ್ತದೆ. ಖಾತೆದಾರರು ಪಾಸ್ ಪುಸ್ತಕವನ್ನು ತರದಿದ್ದರೆ ನಮ್ಮ ಇಲಾಖೆಯಲ್ಲಿರುವ ನಮೂನೆಗಳನ್ನು ತುಂಬಿಸಿ, ಹಣ ಜಮೆ ಮಾಡಲು ಅಥವಾ ವಿತ್ ಡ್ರಾ ಮಾಡಲು ಅವಕಾಶ ಇರುವುದಿಲ್ಲ. ಪಾಸ್ ಪುಸ್ತಕವನ್ನು ತಂದಿದ್ದರೆ ಚೆಕ್ ಸ್ಲಿಪ್ ಅಥವಾ ಪೇ ಸ್ಲಿಪ್ ಬೇಕಾಗುತ್ತದೆ.

ಚಾ.ಸಾ.2 ರಿಂದ 4 ರವರಿಗೆ ಸಂಬಂಧಿಸಿದ ಪಾಸ್ ಪುಸ್ತಕಗಳಲ್ಲಿ ವಿತ್ ಡ್ರಾ ಮಾಡಿದ ಸ್ಲಿಪ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಸದರಿ ಪಾಸ್ ಪುಸ್ತಕಗಳಲ್ಲಿ ವಿತ್ ಡ್ರಾ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ಚಾ.ಸಾ.2 ರಿಂದ 4 ರವರು ಖಾತೆಗೆ ಡೆಪಾಸಿಟ್ ಆಗಿ ಕಾಣಿಸಿದ ಹಣದ ಬಗ್ಗೆ ಸ್ಲಿಪ್ ಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆ ಬಗ್ಗೆ ಖಾತೆಗೆ ಜಮೆ ಆಗಿರುವುದಿಲ್ಲ , ಆದ್ದರಿಂದ ಪೇ ಸ್ಲಿಪ್ ನ ಪ್ರಶ್ನೆಯೇ ಇರುವುದಿಲ್ಲ ಎಂದು ನುಡಿಯುತ್ತಾರೆ.

ದಿನಂಪ್ರತಿ ನಮ್ಮ ಅಂಚೆ ಕಚೇರಿಯಲ್ಲಿ ಎಷ್ಟು ಹಣ ಜಮೆಯಾಗುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಮನಿ ಆರ್ಡರ್ ನ ವಿಷಯವಾಗಿ post master ಮತ್ತು post man ನ ನಡುವೆ ವ್ಯವಹಾರ ಆಗುತ್ತದೆ ಎಂದರೆ ಸರಿ. ಆರೋಪಿಯ ಸೇವಾವಧಿಯಲ್ಲಿ ಮನಿ ಆರ್ಡರ್ ನ ಕುರಿತು ಕರ್ತವ್ಯ ಲೋಪದ ಬಗ್ಗೆ ದೂರು ಬಂದಿರುವುದಿಲ್ಲ. ಚಾ.ಸಾ.2 ರಿಂದ 4 ರಲ್ಲದೇ ಬೇರೆ ಯಾರಿಗಾದರೂ ಆರೋಪಿಯ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ವಿರುದ್ಧವಾಗಿ ದೂರು ಬಂದಿತ್ತಾ ಎಂದರೆ ಸಾಕ್ಷಿಯು , ದೂರು ಬಂದಿತ್ತು , ಆದರೆ ಈ ಪ್ರಕರಣದಲ್ಲಿ ಅವುಗಳನ್ನು ಕಾಣಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಕಟ್ಟುಕತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇಲಾಖಾ ಜವಾಬ್ದಾರಿಯಲ್ಲಿದ್ದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.2 ರಿಂದ 4 ರವರನ್ನು ಹೊರತುಪಡಿಸಿ, ಆರೋಪಿಯ ಬಗ್ಗೆ ಬೇರೆಯವರಿಂದ ದೂರು ಬಂದಿದ್ದರೆ, ದೂರುದಾರರನ್ನು ನಾವು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಮಾಡುತ್ತಿದ್ದೇವು ಎಂದರೆ ಸಾಕ್ಷಿಯು ನಾವು ಇಲಾಖಾ ವಿಚಾರಣೆ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಇಲಾಖಾ ವಿಚಾರಣೆಯ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲಾಖಾ ವಿಚಾರಣೆಯು ಸಾಧಾರಣಾವಾಗಿ 2-3 ವರ್ಷಗಳ ಕಾಲ ನಡೆಯುತ್ತದೆ. ಆದ್ದರಿಂದ ಅದರ ಇತ್ಯರ್ಥದ ಕುರಿತು ನನಗೆ ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ.ಈ ವಿಚಾರಗಳನ್ನು ನನ್ನ ಪಿರ್ಯಾದಿಯಲ್ಲಾಗಲೀ, ನನ್ನ ಮುಖ್ಯ ವಿಚಾರಣೆಯಲ್ಲಿ, ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ನಿಪಿ-8 ರಲ್ಲಿರುವ ಬರವಣಿಗೆಯು ನನ್ನದಾಗಿರುತ್ತದೆ. ನಿಪಿ-8 ರ ದಾಖಲೆಯು ಆರೋಪಿಯ ವಿರುದ್ಧ ಕಟ್ಟುಕತೆಗಳನ್ನು ಪೋಣಿಸಿದ ಸೃಷ್ಟೀಕೃತ ದಾಖಲೆ ಎಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಪಟ್ಟ ಲೆಡ್ಜರ್ ಎಕ್ಸಾಟ್ರಾಕ್ಟನ್ನು ಸುಳ್ಯ ಪೋಸ್ಟ್ ಮಾಸ್ಟರ್

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ರವರು ಬರೆದಿರುತ್ತಾರೆ. ನಿಪಿ-6 ನ್ನು ಕೂಡಾ ಈ ಕೇಸಿಗಾಗಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

ನಿಪಿ-4 ರಲ್ಲಿ ನಮೂದಿಸಿದ ನಮೂದು ಕೂಡಾ ಆರೋಪಿಯು ನಮೂದು ಮಾಡಿರುವುದಿಲ್ಲ , ನಾನು ಅದನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಆರೋಪಿಯ ಬರವಣಿಗೆಯು ಆಗಿರುವುದಿಲ್ಲ , ಅದನ್ನು ನಾನು ಬರೆದಿರುತ್ತೇನೆ ಎಂದರೆ ಸರಿಯಲ್ಲ.

ಚಾ.ಸಾ.2 ರಿಂದ 4 ರವರು ನನ್ನ ಸಮಕ್ಷಮ ಯಾವುದೇ ಹಣವನ್ನು ಡೆಪಾಸಿಟ್ ಮಾಡಿದ್ದಾಗಲೀ , ಪಾವತಿ ಮಾಡಿದ್ದಾಗಲೀ ಇಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ನಿಪಿ-4 ರಿಂದ ಹಾಗೂ 24 ರ ದಾಖಲೆಗಳನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಆರೋಪಿಯ ತಂದೆಯವರು ಮಾಡುತ್ತಿದ್ದ ವೃತ್ತಿಯಲ್ಲಿ ಉತ್ತಮ ಹೆಸರನ್ನು ಹೊಂದಿದ್ದು, ಅದನ್ನು ಒಳ್ಳೆಯ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುತ್ತಿದ್ದ ಆರೋಪಿಯು , ಅವರು ತನ್ನ ಹುದ್ದೆಯಲ್ಲಿ ಖಾಯಂ ಆಗುವುದನ್ನು ತಪ್ಪಿಸಲು, ನಾವು ಅವರ ಮೇಲೆ ಈ ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಆಗಾಗ್ಗೆ ನೋಟೀಸು ನೀಡಿ , ಆಗಾಗ್ಗೆ ಅಂಚೆ ಕಚೇರಿಗೆ ಬರಹೇಳುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ಕರ್ತವ್ಯ ಲೋಪಪವಾಗಿದ್ದರೆ 2002-2004

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ರಲ್ಲಿಯೇ ಆರೋಪಿಯ ವಿರುದ್ಧ ದೂರನ್ನು ನೀಡುತ್ತಿದೆವು ಎಂದರೆ ಸಾಕ್ಷಿಯು ಪಾಸ್ ಬುಕ್ ನ್ನು ನೋಡಿದ ನಂತರವೇ ಆರೋಪಿಯು ಕರ್ತವ್ಯ ಲೋಪ ಮಾಡಿದ್ದರ ಬಗ್ಗೆ ಅರಿವು ಆಗಿದ್ದು , ಅನಂತರವೇ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ.

ಚಾ.ಸಾ.2 ರಿಂದ 4 ರವರು ಆರೋಪಿಯ ವಿರುದ್ಧ ದೂರನ್ನು ನೀಡಿರುವುದಿಲ್ಲ , ನಾವೇ ಅವರನ್ನು ಕರೆಸಿಕೊಂಡು , ಅವರ ಹೇಳಿಕೆಗಳನ್ನು ಪಡೆದುಕೊಂಡು ಸುಳ್ಳು ಕೇಸಿಗೆ ಪೂರಕವಾಗಿ ಅವರ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಇಲಾಖಾ ನಿಯಮದಂತೆ ಕಾಲಕಾಲಕ್ಕೆ ಪರಿಶೀಲನೆಗೆಂದು ಅಂಚೆ ಕಚೇರಿಗೆ ಹೋಗದೆ ಇದ್ದ ಕಾರಣ ನನ್ನ ಕರ್ತವ್ಯ ಲೋಪವನ್ನು ಮರೆ ಮಾಚುವ ಉದ್ದೇಶದಿಂದ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಒಂದು ವೇಳೆ ಖಾಯಂ ನೇಮಕಾತಿಯಾದರೆ ನನ್ನ ಕರ್ತವ್ಯಲೋಪದ ಬಗ್ಗೆ ನಮ್ಮ ಮೇಲಧಿಕಾರಿಯವರಿಗೆ ನನ್ನ ಬಗ್ಗೆ ದೂರನ್ನು ಸಲ್ಲಿಸುತ್ತಾರೆಂಬ ಭಯದಿಂದ ನಾನು ಆರೋಪಿಯ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಚಾ.ಸಾ.2 ರಿಂದ 4 ರವರಿಗೆ ಸಂಬಂಧಿಸಿದ ದಾಖಲೆಗಳು ಸೃಷ್ಟೀಕೃತ ದಾಖಲೆಗಳು ಎಂದರೆ ಸರಿಯಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ದಿನಾಂಕ 25-04-2007 ರಂದು ನಾನು ನೀಡಿದ ಹೇಳಿಕೆ, ಮರು ಹೇಳಿಕೆ, ಪೊಲೀಸರಿಗೆ ನೀಡಿದ ಹೇಳಿಕೆ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿದ ಒಂದಕ್ಕೊಂದು ವ್ಯತಿರಿಕ್ತವಾಗಿರುತ್ತವೆ ಎಂದರೆ ಸರಿಯಲ್ಲ. ಪೊಲೀಸರಿಗೆ ನೀಡಿದ ದಾಖಲೆಗಳು ನನ್ನ ಬಳಿ ಎಲ್ಲೋ ಸುಪರ್ದಿಯಲ್ಲಿದ್ದ ದಾಖಲೆಗಳು ಆಗಿರುತ್ತವೆ, ಅವುಗಳು ಆರೋಪಿಗೆ ಸಂಬಂಧಿಸಿದ ದಾಖಲೆಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

ಇಲಾಖಾ ಕಡತದಲ್ಲಿರುವ ಹೆಸರುಗಳಾದ ಕೆ.ಗಾಯತ್ರಿ, ದಾಮೋದರ ಪಾಟಾಳಿ, ಜಯರಾಮ ಭಟ್ ರವರ ಹೇಳಿಕೆಗಳನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ನನ್ನ ಅವಧಿಯ ನಂತರದ ಅಧಿಕಾರಿಯವರು ಪೊಲೀಸರಿಗೆ ನೀಡಿರಬಹುದು , ಅದರ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಈ ಕೇಸಿನ ಬಗ್ಗೆ ಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಈ ಅವಧಿಯಲ್ಲಿ ವರ್ಗಾವಣೆಗೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ಆರೋಪಿಯು ಯಾವುದೇ ತಪ್ಪು ಮಾಡಿಲ್ಲ , ಆರೋಪಿಯು ಯಾವುದೇ ಹಣ ದುರುಪಯೋಗ ಮಾಡಿಲ್ಲ ಎಂದರೆ ಸರಿಯಲ್ಲ. ಚಾ.ಸಾ.2 ರಿಂದ 4 ರವರು ನನ್ನ ಆಪ್ತರಾಗಿದ್ದರಿಂದ ಅವರನ್ನು ಸೇರಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.2 ರಿಂದ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

4 ರವರಿಗೆ ಒಂದು ವೇಳೆ ತೊಂದರೆಯಾಗಿದ್ದರೆ ಅವರೇ ಪಿರ್ಯಾದಿಯನ್ನು ಖುದ್ದಾಗಿ ನೀಡುತ್ತಿದ್ದರು ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

ನನ್ನ ಉಕ್ತಲೇಖನದ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸುಳ್ಯ.ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ